ಇ) *ಬಿಡುಗಡೆಯಾದ ಹಣವೆಷ್ಟು? (ತಾಲ್ಲೂಕುವಾರು ವಿವರ)*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಈ ಹೆಸರಿನ ಕಾರ್ಯಕ್ರಮವನ್ನು ಸರ್ಕಾರದಿಂದ ಜಾರಿ ಮಾಡುತ್ತಿಲ್ಲ. "The Concerned for working Children" ಎಂಬ ಸ್ವಯಂಸೇವಾ ಸಂಸ್ಥೆಯು ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ (13 ಗ್ರಾಮಗಳಲ್ಲಿ) ಈ ಹೆಸರಿನ ಕಾರ್ಯಕ್ರಮವನ್ನು ಜಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಕಾರ್ಯಕ್ರಮವನ್ನು ಮೂರು ವರ್ಷಗಳ ನಂತರ ಸರ್ಕಾರದಿಂದ ಮುಂದುವರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ

ಪಾಂಡವಪುರ ತಾಲ್ಲೂಕಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು

2504 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಪಾಂಡವಪುರ ತಾಲ್ಲೂಕಿಗೆ ಸಂಬಂಧಪಟ್ಟಂತೆ ಪ್ರೇಕ್ಷಣೀಯ ಸ್ಥಳಗಳಾವುವು?*

ಆ) *ತೊಣ್ಣೂರು ಕೆರೆ, ಕುಂತಿ ಬೆಟ್ಟ ಮತ್ತು ಮೇಲುಕೋಟೆ ಈ ಮೂರು ಸ್ಥಳಗಳನ್ನು ಪ್ರವಾಸೋದ್ಯಮ ಇಲಾಖೆಗೆ ಸೇರ್ಪಡೆ ಆಗಿವೆಯೇ? ಆಗಿದ್ದಲ್ಲಿ ಈ ಇಲಾಖೆಯಿಂದ ಬರುವ ಯಾವ ಯಾವ ಸವಲತ್ತುಗಳನ್ನು ಒದಗಿಸಲಾಗಿದೆಯೇ?*

ಶ್ರೀ ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಗಳು) :

ಅ) ಮೇಲುಕೋಟೆ

ಆ) ಹೌದು

ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಪ್ರವಾಸೋದ್ಯಮ ಸೌಲಭ್ಯಗಳಾದ ಹೋಟೆಲ್, ರೆಸ್ಟೋರೆಂಟ್ಸ್ ಇತ್ಯಾದಿಗಳನ್ನು ಪ್ರವಾಸೋದ್ಯಮ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಅವಕಾಶ ನೀಡಲಾಗಿದೆ. ಈ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಖಾಸಗಿಯವರು ವಾಣಿಜ್ಯ ದೃಷ್ಟಿಯಿಂದ ಪಾಲ್ಗೊಳ್ಳುವರಾಗಿ ಸರ್ಕಾರವು ನಿರೀಕ್ಷಿಸುತ್ತದೆ. ಖಾಸಗಿಯವರನ್ನು ಆಕರ್ಷಿಸುವ ಸಲುವಾಗಿ ಸರ್ಕಾರವು ಅನೇಕ ರಿಯಾಯಿತಿ ಉತ್ತೇಜನಗಳನ್ನು ಹೆಚ್ಚಿಸಿದೆ. ಈ ಒಂದು ಕಾರಣಕ್ಕಾಗಿ ಪ್ರವಾಸಿ ಕೇಂದ್ರಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಮೂರು ತಂಡ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು. ತೊಣ್ಣೂರು ಕೆರೆ, ಕುಂತಿಬೆಟ್ಟ ಪ್ರವಾಸೋದ್ಯಮ ನೀತಿಯಲ್ಲಿ 'ಬಿ' ಗುಂಪಿನಲ್ಲೂ ಮತ್ತು ಮೇಲು ಕೋಟೆಯನ್ನು 'ಸಿ' ಗುಂಪಿನಲ್ಲೂ ಸೇರಿಸಲಾಗಿದೆ. ಮೇಲುಕೋಟೆಯಲ್ಲಿ ರೂ. 33.00 ಲಕ್ಷ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಮೂಲಭೂತ ನಾಗರೀಕ ಸೌಲಭ್ಯಗಳಾದ ರಸ್ತೆ, ನೀರು ಸರಬರಾಜು ಇತ್ಯಾದಿಗಳಿಗಾಗಿ ಸರ್ಕಾರವು ಮಾಸ್ಟರ್ ಪ್ಲಾನ್ ತಯಾರಿಸಿದೆ ಮತ್ತು ಇದನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವುದು.

ಪಾಂಡವಪುರ ತಾಲ್ಲೂಕು ತೊಣ್ಣೂರು ಕೆರೆ ಮತ್ತು ಕುಂತಿಬೆಟ್ಟ ಮತ್ತು ಮೇಲು ಕೋಟೆಗಳನ್ನು ಪ್ರವಾಸೋದ್ಯಮಕ್ಕೆ, ಸೇರಿಸುವುದು.

2302 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?